# ಬಿಡುಗಡೆ

ಅತ್ತ,
ಬಿಡುಗಡೆಗೊಂಡಿದ್ದಾನೆ ದೇವಸ್ಥಾನದೊಳಗೆ
ಲಾಕ್‌ಡೌನ್ ಆದ ದೇವರು.
ಘಂಟೆ ಜಾಗಟೆ ನೈವೇದ್ಯ ಮಂಗಳಾರತಿ
ಕರಾರುವಾಕ್ಕಾಗಿ ಮುಗಿಸಿ ಕದವಿಕ್ಕಿಸಿಕೊಳ್ಳುತ್ತ
ಶತಮಾನಗಳೇ ಕಳೆದ ದೇವರು
ಅಭಿಷೇಕ ಅಲಂಕಾರವಿಲ್ಲದೇ ಬೀದಿಗಿಳಿದಿದ್ದಾನೆ.
ಮರೆತು ತನ್ನ ಹೆಸರ ಕಾಲಾತೀತನಾಗಿದ್ದಾನೆ.

ಏಳುಮಲೆಯಿಳಿದು ತಿಮ್ಮಪ್ಪ ಮಾದೇಶನ ಜೊತೆ
ನಿಸೂರಗಿದ್ದಾನೆ ಹೊಳೆಯಲ್ಲಿ ಕಾಲುಚಾಚಿ
ಹದಿನಾಲ್ಕು ಮೆಟ್ಟಿಲಿಳಿದು ಬಂದ ಅಯ್ಯಪ್ಪ
ಮೊಲೆಯುಣ್ಣುತ್ತಿದ್ದಾನೆ ಅವ್ವನ ತೊಡೆಯಲ್ಲೊರಗಿ.
ಶಿಶುಗಳಾಗಿ ಬ್ರಹ್ಮ ವಿಷ್ಣು ಮಹೇಶ್ವರರೆಲ್ಲ
ಅನಸೂಯೆಯ ಅಡಿಗೆಮನೆಯಲ್ಲಿ ಬೆತ್ತಲಾಗಿ
ಮೈಮರೆತಿದ್ದಾರೆ ಉಂಡು ಬೆರಳು ಚೀಪುತ್ತ.
ಸೃಷ್ಟಿಗೂ ಪುರುಸೊತ್ತಿದೆ ಪೊರೆಯಲು ಈಗ
ಕಾಲದ ಕೀಲು ಕಳಚಿಟ್ಟು ಮಕ್ಕಳ ತೊಟ್ಟಿಲಲ್ಲಿಟ್ಟು
ಜೀಕುವ ಸದ್ದಿಗೆ ಲಯಬದ್ಧವಾಗಿದೆ ಭೂಮಿ.

ದುರ್ಗಿ ಕಾಳಿ ಮಾರಮ್ಮ ಮುತ್ಯಾಲಮ್ಮರೆಲ್ಲ
ಆಯುಧ ಬಿಸಾಕಿ ಮನೆಕಡೆ ಮುಖಮಾಡಿದ್ದಾರೆ
ಲೀಲೆ ಲಲಿತೆ ಲಕ್ಷ್ಮಿ ಪಾರ್ವತಿಯರ ಕೂಡ
ಪಟ್ಟಾಂಗ ನಡೆಸಿದ್ದಾರೆ
ಅಡಿಗೆಯಾಗುತ್ತಿದೆ ಮಣ್ಣಮಡಕೆಯಲಿ
ಅಗ್ನಿ ಜಲ ಆಕಾಶಗಳ ಅಳೆದಿಟ್ಟು.
ಪರಿಮಳಕೆ ಮೂಗರಳಿಸಿಕೂತ
ಮುಕ್ಕೋಟಿ ದೇವತೆಗಳೆಲ್ಲ ದೀನರಾಗಿ
ಉಗುರು ಕತ್ತರಿಸಿಕೊಂಡ ರಕ್ಕಸರೆಲ್ಲ ಮಕ್ಕಳಾಗಿ
ತಾಯ ಕರುಣೆಯ ಕೂಳು ಕೋರಿ
ಬೊಗಸೆಯೊಡ್ಡಿದ್ದಾರೆ.